ದಿನಾಂಕಃ 29-04-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ** ವಾದಿ ಪರ ವಕೀಲರಿಂದ,

1) ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ನನ್ನ ತಂದೆಗೆ ಒಟ್ಟು 7 ಜನ ಮಕ್ಕಳು ಎಂದು ನುಡಿಯುತ್ತಾರೆ. ವಾದಿ, ಪ್ರತಿವಾದಿ 1 ರಿಂದ 7 ರವರು ಒಟ್ಟು ಕುಟುಂಬದ ಸದಸ್ಯರು ಎಂದರೆ ಸರಿಯಲ್ಲ. ವಾದಿ, ಪ್ರತಿವಾದಿ 1 ಮತ್ತು ಪ್ರತಿವಾದಿ 4 ನನ್ನ ಸಹೋದರಿಯರು ಎಂದರೆ ಸರಿ. ದಾವಾ ಸ್ವತ್ತುಗಳು ಒಟ್ಟು ಕುಟುಂಬದ ಸತ್ತುಗಳೆಂದರೆ ಸಾಕ್ಷಿಯು 1989 ನೇ ಸಾಲಿನಲ್ಲಿ ವಿಭಾಗ ಆಗಿರುತ್ತದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಗಳು ನನ್ನ ತಂದೆಗೆ ಪೂರ್ವಕರಿಂದ ಮತ್ತು ನನ್ನ ತಂದೆಯ ಸ್ವಂತ ಸಂಪಾದನೆಯಿಂದ ಬಂದಿರುತ್ತವೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ನನ್ನ ತಂದೆ ಜೀವಂತ ಅವಧಿಯಲ್ಲಿ ಒಟ್ಟಾಗಿ ಸಾಗುವಳಿ ಮಾಡುತ್ತಿದ್ದೇವು ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ದಾಖಲಾತಿಗಳ ಬಗ್ಗೆ ನನಗೆ ಮಾಹಿತಿ ಇರುತ್ತದೆ. ಅಸಲು ದಾವೆ ನಂ. 366/1989 ದಾವೆಯಲ್ಲಿ ಹಾಜರುಪಡಿಸಿರುವ ವಂಶವೃಕ್ಷದಲ್ಲಿ ವಾದಿ, ಪ್ರತಿವಾದಿ 1 ಮತ್ತು 4 ರವರನ್ನು ನಮೂದಿಸಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ವಾದಿ, ಪ್ರತಿವಾದಿ 1 ಮತ್ತು 4 ಪಕ್ಷಗಾರರಾಗಿರುವುದಿಲ್ಲ. ನನ್ನನ್ನು ಹೊರತುಪಡಿಸಿ ಇತರೇ ಕುಟುಂಬದ ಸದಸ್ಯರು ವಿದ್ಯಾಭ್ಯಾಸ ಮಾಡಿರುವುದಿಲ್ಲ ಎಂದರೆ ಸರಿ. ನಾನು ನನ್ನ ಸಹೋದರ ಮತ್ತು ಸಹೋದರಿಯರಿಗೆ ಮೋಸ ಮಾಡಬೇಕೆಂಬ ಉದ್ದೇಶದಿಂದ ಅಸಲು ದಾವೆ ನಂ. 366/1989 ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಮೇಲ್ಕಂಡ ದಾವೆಯಲ್ಲಿ ನನ್ನ ತಂದೆಯನ್ನು ಬಿಟ್ಟು ರಾಜಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ದಾವೆಯ ರಾಜಿ ಅರ್ಜಿಯಲ್ಲಿ ನನ್ನ ತಂದೆಯ ಭಾಗ ಯಾವುದೇ ಆಸ್ತಿಯನ್ನು ತೋರಿಸಿರುವುದಿಲ್ಲ ಎಂದರೆ ಸರಿಯಲ್ಲ. ರಾಜಿ ಅರ್ಜಿಯಲ್ಲಿ ನನ್ನ ತಂದೆಯ ಭಾಗಕ್ಕೆ ಯಾವುದೇ ಆಸ್ತಿಯನ್ನು ತೋರಿಸದೇ ಇದ್ದರೂ ಸಹ ತೋರಿಸಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ರಾಜಿ ಅರ್ಜಿಗೆ ನನ್ನ ತಂದೆ ಸಮ್ಮತಿ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಸಹೋದರಿಯರು ನಮ್ಮ ಮನೆಗೆ ಬಂದು ಹೋಗುತ್ತಿದ್ದರು ಎಂದರೆ ಸರಿ. ನನ್ನ ತಂದೆ 2012 ರಲ್ಲಿ ತೀರಿಕೊಂಡಿರುತ್ತಾರೆ ಎಂದರೆ ಸರಿ. ನನ್ನ ತಂದೆ ಜೀವಂತ ಅವಧಿಯಲ್ಲಿ ನನ್ನ ಸಹೋದರಿಯರಿಗೆ ದವಸ ದಾನ್ಯ ಕೊಡುತ್ತಿದ್ದರು ಎಂದರೆ ಸರಿ. ನನ್ನ ತಂದೆ ತೀರಿಕೊಂಡ ನಂತರ ನನ್ನ ಸಹೋದರಿಯರಿಗೆ ದವಸ ದಾನ್ಯ ನೀಡುವುದನ್ನು

ನಿರಾಕರಿಸಿರುತ್ತೇವೆ ಎಂದರೆ ಸರಿಯಲ್ಲ. ನಾನು ದವಸ ದಾನ್ಯಗಳನ್ನು ಸಹೋದರಿಯರಿಗೆ ನೀಡುವುದನ್ನು ನಿಲ್ಲಿಸಿದ ಕಾರಣ ವಾದಿ ನನ್ನ ಬಳಿ ಭಾಗ ಕೇಳಿರುತ್ತಾರೆ ಎಂದರೆ ಸರಿಯಲ್ಲ. ನಾನು ವಾದಿಗೆ ಭಾಗಾಂಶ ನೀಡದ ಕಾರಣ ಈ ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ.

2) ರಾಜಿ ಅರ್ಜಿಯಲ್ಲಿ ನನ್ನ ತಂದೆಗೆ ಭಾಗಾಂಶ ಹಕ್ಕು ನೀಡಿದ್ದೇ ಆದಲ್ಲಿ ವಾದಿಗೆ ರಾಜಿ ಅರ್ಜಿಯ ಬಗ್ಗೆ ತಿಳಿದಿರುತ್ತದೆ ಎಂದರೆ ಸರಿಯಲ್ಲ. ವಾದಿಗೆ ಅಸಲು ದಾವೆ ನಂ. 366/1989 ರ ಡಿಕ್ರಿಯ ಬಗ್ಗೆ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ನಾನು ದಾಖಲಾತಿಗಳನ್ನು ಸಲ್ಲಿಸುವ ಕಾಲದವರೆಗೂ ಸಹ ವಾದಿಗೆ ಅಸಲು ದಾವೆ ಸಂಖ್ಯೆ 366/1989 ರ ಬಗ್ಗೆ ತಿಳಿದಿರುವುದಿಲ್ಲ ಎಂದರೆ ಸರಿಯಲ್ಲ. ಅಸಲು ದಾವೆ ನಂ. 366/1989 ರ ಡಿಕ್ರಿ ವಾದಿಯ ಹಿಸ್ಸೆಗೆ ಬಂಧನಕಾರಿಯಾಗುವುದಿಲ್ಲ ಎಂದರೆ ಸರಿಯಲ್ಲ. ಸರ್ವೇ ನಂ. 3/1 ರಲ್ಲಿ 13 ಗುಂಟೆ ಆಸ್ತಿ 6 ನೇ ಪ್ರತಿವಾದಿ ದಿನಾಂಕ 20.06.2017 ರಲ್ಲಿ ವಿಭಾಗ ಆಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಪೋಡ ಆಗಿರುತ್ತದೆ ಎಂದು ನುಡಿಯುತ್ತಾರೆ. ಸರ್ವೇ ನಂ. 3/3 ರಲ್ಲಿ 11 ಗುಂಟೆ ಆಸ್ತಿ 3 ನೇ ಪ್ರತಿವಾದಿಗೆ ದಿನಾಂಕ 31.07.2017 ರಲ್ಲಿ ವಿಭಾಗ ಆಗಿದೆ ನಮೂದು ಆಗಿರುತ್ತದೆ ಎಂದರೆ ಸರಿ. ನಿಪಿ-06 ರಂತೆ ಪಹಣಿ ಪತ್ರಿಕೆ ನನ್ನ ಹೆಸರಿಗೆ ಖಾತೆ ಆಗಿರುತ್ತದೆ ಎಂದರೆ ಸರಿ. ನಿಪಿ-07 ರಂತೆ ಪಹಣಿ ಪತ್ರಿಕೆ 3 ಪ್ರತಿವಾದಿ ಹೆಸರಿಗೆ ಖಾತೆ ಆಗಿರುತ್ತದೆ ಎಂದರೆ ಸರಿ. ನಿಪಿ-10 ರಂತೆ ಪಹಣಿ ಪತ್ರಿಕೆ ನನ್ನ ಹೆಸರಿಗೆ ಖಾತೆ ಆಗಿರುತ್ತದೆ ಎಂದರೆ ಸರಿ. ನಿಪಿ-11 ರಂತೆ ಪಹಣಿ ಪತ್ರಿಕೆ 3 ನೇ ಪ್ರತಿವಾದಿ ಹೆಸರಿಗೆ ಖಾತೆ ಆಗಿರುತ್ತದೆ ಎಂದರೆ ಸರಿ. ನಿಪಿ-15 ರಂತೆ ಪಹಣಿ ಪತ್ರಿಕೆ 5 ನೇ ಪ್ರತಿವಾದಿ ಹೆಸರಿಗೆ ಖಾತೆ ಆಗಿರುತ್ತದೆ ಎಂದರೆ ಸರಿ. ನಿಪಿ-16 ರಂತೆ 3 ನೇ ಪ್ರತಿವಾದಿ ಮೋಸದಿಂದ ತನ್ನ ಹೆಸರನ್ನು ಪಹಣಿಯಲ್ಲಿ ನಮೂದಿಸಿಕೊಂಡಿರುತ್ತಾರೆ ಎಂದರೆ ಸರಿ.

3) ನಿಪಿ-17 ಮತ್ತು 18 ರಂತೆ ಪ್ರತಿವಾದಿ 5 ಮತ್ತು 6 ರವರಿಗೆ ಖಾತೆ ಬದಲಾವಣೆ ಆಗಿದೆ ಎಂದರೆ ಸರಿ. ನಿಪಿ-20 ರ ದಾಖಲಾತಿಯಂತೆ ನನ್ನ ಹೆಸರಿನಲ್ಲಿ ಖಾತೆ ಇರುತ್ತದೆ ಎಂದರೆ ಸರಿ. ನಿಪಿ-21 ರಂತೆ ನನ್ನ ಹೆಸರಿಗೆ ಖಾತೆ ಆಗಿರುತ್ತದೆ ಎಂದರೆ ಸಾಕ್ಷಿಯು 1989 ರಲ್ಲಿ ಆಗಿರುತ್ತದೆ ಎಂದು ನುಡಿಯುತ್ತಾರೆ. 1989 ರ ರಾಜಿ ಡಿಕ್ರಿ ಪ್ರಕಾರ ಖಾತೆ ಆಗಿರುವುದಿಲ್ಲ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ</u>** ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲು ವಿಚಾರಣೆಗೆ ಕಾಲಾವಕಾಶ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ